# ಸ್ಥಳೀಯ ಸರ್ಕಾರದ ಚುಕ್ಕಾಣಿ: ಜನಪ್ರತಿನಿಧಿಗಳ ಕೈಗೋ – ಅಧಿಕಾರಿಗಳ ಕೈಗೋ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಚುನಾವಣೆ' ಎನ್ನುವುದು ಅತೀ ಪ್ರಮುಖವಾದ ಪ್ರಕ್ರಿಯೆ. ಚುನಾವಣೆಯ ಮೂಲಕ ಆಯ್ಕೆಯಾದ ಜನಪ್ರತಿನಿಧಿಗಳಿಗೆ ಅಥವಾ ಸರ್ಕಾರಕ್ಕೆ ಆಡಳಿತಾವಧಿಯು ನಿಗಧಿಯಾಗಿದ್ದು, ಅದು ಮುಗಿಯುವ ಮುನ್ನ ಚುನಾವಣೆ ನಡೆದು ನೂತನ ಪ್ರತಿನಿಧಿಗಳ ಆಯ್ಕೆಯಾಗಿ ಹೊಸ ಸರ್ಕಾರದ ರಚನೆಗೆ ಅಗತ್ಯವಿರುವ ತಯಾರಿಗಳು ನಡೆಯುತ್ತದೆ. ತೀವ್ರ ತುರ್ತು ಅಥವಾ ಆಡಳಿತದಲ್ಲಿ ಸರ್ಕಾರ ವಿಫಲವಾದಾಗ ಮಾತ್ರ ರಾಷ್ಟ್ರಪತಿಗಳು, ರಾಜ್ಯಪಾಲರು ಹಾಗೂ ಅಧಿಕಾರಿಗಳು ಆಯಾ ಹಂತದ ಸರ್ಕಾರದ ಆಳ್ವಿಕೆಯನ್ನು ನಡೆಸುವ ಅವಕಾಶವಿದೆಯಾದರೂ, ಅದು ಅಲ್ಪಾವಧಿಗೆ ಮಾತ್ರ. ಅದರೊಳಗೆ ಪುನಃ ಚುನಾವಣೆ ನಡೆದು, ಆಯ್ಕೆಯಾದ ಪ್ರತಿನಿಧಿಗಳಿಂದ ಸರ್ಕಾರ ರಚನೆಯಾಗಬೇಕು.

ಈಗ ಇದೆಲ್ಲಾ ನೆನಪಾಗಿದ್ದು ಯಾಕೆಂದರೆ, ಈ ಸನ್ನಿವೇಶದಲ್ಲಿ ಎಲ್ಲವೂ ಸರಿಯಾಗಿದ್ದಿದ್ದರೆ, ಗ್ರಾಮೀಣ ಕನಾಟಕವು ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತ್‌ಗಳ ಚುನಾವಣೆಯ ಕಾವು ಮತ್ತು ಫಲಿತಾಂಶದ ನಿರೀಕ್ಷೆಯೊಂದಿಗೆ ನೂತನ ಗ್ರಾಮ ಸರ್ಕಾರದ ಲೆಕ್ಕಾಚಾರದಲ್ಲಿ ಮುಳುಗಿರುತ್ತಿತ್ತು. ಆದರೆ ಸಂದರ್ಭ ಸಂಪೂರ್ಣ ಬದಲಾಗಿದೆ. ಜಗತ್ತನ್ನು ಆವರಿಸಿಕೊಂಡಿರುವ ಕೋವಿಡ್ – 19ರ ಪರಿಣಾಮ ನಮ್ಮ ರಾಜ್ಯದಲ್ಲಿಯೂ ಉಂಟಾಗಿದೆ. ಅದು ಗ್ರಾಮ ಮಟ್ಟದವರೆಗೂ ವ್ಯಾಪಿಸಿದೆ. ಗ್ರಾಮ ಸರ್ಕಾರಗಳ ಆಡಳಿತಾವಧಿ ಮುಗಿಯುತ್ತಾ ಬಂದಿರುವ ಈ ಹೊತ್ತಿನಲ್ಲಿ, ರಾಜ್ಯದ ಸುಮಾರು 6020ಕ್ಕೂ ಹೆಚ್ಚಿನ ಗ್ರಾಮ ಪಂಚಾಯತ್‌ಗಳಿಗೆ ನಡೆಯಬೇಕಾಗಿದ್ದ ಚುನಾವಣೆಯ ಮೇಲೂ ಪರಿಣಾಮ ಬೀರಿದೆ.

ಈ ಆರೋಗ್ಯ ತುರ್ತು ಪರಿಸ್ಥಿತಿಯಿಂದಾಗಿ ಗ್ರಾಮ ಪಂಚಾಯತ್‌ಗಳಿಗೆ ಚುನಾವಣೆ ನಡೆಯುವ ಯಾವ ಲಕ್ಷಣವೂ ಕಾಣುತ್ತಿಲ್ಲ. ಚುನಾವಣೆ ನಡೆಸಲು ಸರ್ಕಾರವೂ ಕ್ರಮ ಕೈಗೊಳ್ಳುವ ಬಗ್ಗೆ ಯಾವುದೇ ಮುನ್ಸೂಚನೆಯನ್ನು ನೀಡುತ್ತಿಲ್ಲ. ಸರ್ಕಾರವೇ ಹೇಳಿದಂತೆ ಚುನಾವಣೆಯನ್ನು ಮುಂದೂಡಿ, ಗ್ರಾಮ ಪಂಚಾಯತ್‌ಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯನ್ನು ನೇಮಿಸುವತ್ತ ತಯಾರಿ ನಡೆಸುತ್ತಿದೆ. ಸರ್ಕಾರ ತೆಗೆದುಕೊಳ್ಳುವ ಪರ್ಯಾಯಗಳು ಸ್ಥಳೀಯ ಸರ್ಕಾರಗಳಿಗೆ ಬಲ ತುಂಬುವ ಬದಲಿಗೆ ಬಲಹೀನಗೊಳಿಸಲು ಸಜ್ಜಾಗುತ್ತಿರುವುದು ಮಾತ್ರ ವಿಪರ್ಯಾಸ. ಸರ್ಕಾರ ಆಲೋಚಿಸುತ್ತಿರುವ ಈ ಎರಡೂ ಕ್ರಮಗಳು ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಸೂಕ್ತವಲ್ಲ. ಯಾವುದೇ ಸಂದರ್ಭದಲ್ಲೂ **ಚುನಾವಣೆ ನಡೆಸುವುದೇ ಮೊದಲ ಆದ್ಯತೆ**. ಇದು ಸಾಧ್ಯವಿಲ್ಲವಾದರೆ ಮಾತ್ರ **ಈಗ ಆಡಳಿತದಲ್ಲಿರುವ ಚುನಾಯಿತ ಸದಸ್ಯರನ್ನೊಳಗೊಂಡ ಗ್ರಾಮ ಸರ್ಕಾರವನ್ನೇ ಸ್ಥಳೀಯಾಡಳಿತ ಸಮಿತಿಯಾಗಿ ಚುನಾವಣೆಯವರೆಗೆ ಮುಂದುವರೆಸುವುದು** ಇನ್ನೊಂದು ಸೂಕ್ತವಾದ ಪರ್ಯಾಯ.

ಕೊರೊನಾವು ದೇಶಾದ್ಯಂತ ಆತಂಕ ಸೃಷ್ಟಿಸುತ್ತಿರುವಾಗ, ಸ್ಥಳೀಯವಾಗಿ ಗ್ರಾಮ ಮಟ್ಟದಲ್ಲಿ ಪರಿಸ್ಥಿತಿಯು ಕೈಮೀರಿ ವಿಕೋಪಕ್ಕೆ ಹೋಗದಂತೆ, ಜಾಗರೂಕತೆ ಕಾರ್ಯನಿರ್ವಹಿಸಿದವರು ಈಗಿರುವ ಚುನಾಯಿತ ಪ್ರತಿನಿಧಿಗಳು. ರಾಜ್ಯ ಸರ್ಕಾರದ ಆದೇಶದಂತೆ ಗ್ರಾಮ ಮಟ್ಟದಲ್ಲಿ ಕಾರ್ಯಪಡೆ (ಜಾರಿಪಡೆ)ಯನ್ನು ರಚನೆ ಮಾಡಿಕೊಂಡು, ಪಂಚಾಯತ್ ಮಟ್ಟದ ವಿವಿಧ ಅಧಿಕಾರಿಗಳ ಸಹಭಾಗಿತ್ವದೊಂದಿಗೆ ಕಾರ್ಯಪಡೆಯ ಮುಂದಾಳತ್ವವಹಿಸಿದವರು ಗ್ರಾಮ ಪಂಚಾಯತ್ ಅಧ್ಯಕ್ಷರು. ಅವರಿಗೆ ಮಂತ್ರಿಮಂಡಲದಂತೆ ಜೊತೆಯಾಗಿ ಹೆಗಲು ಕೊಟ್ಟವರು ಉಪಾಧ್ಯಕ್ಷರು ಹಾಗೂ ಇತರ ಸದಸ್ಯರು. ಈ 5 ವರ್ಷದಲ್ಲಿ ಗ್ರಾಮ ಸರ್ಕಾರದಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ, ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅರ್ಥೈಸಿಕೊಂಡು ಜನರ ಪ್ರತಿನಿಧಿಗಳಾಗಿ ಅವರಿಗೆ ತೋರಿದ ಬದ್ಧತೆಗಳೇ ಇಂದು ಕೊರೋನಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಾಗಿದೆ ಎನ್ನಬಹುದು.

ಕೊರೊನಾ ನಿಯಂತ್ರಣಕ್ಕೆ ವಿಧಿಸಿದ ಲಾಕ್‌ಡೌನ್ ಸಡಿಲವಾಗುತ್ತಿದ್ದರೂ ಪರಿಸ್ಥಿತಿ ಮಾತ್ರ ಹತೋಟಿಗೆ ಬಂದಿಲ್ಲ. ಅದರ ಪರಿಣಾಮ ಇನ್ನೂ ಕೆಲವು ತಿಂಗಳುಗಳ ಕಾಲ ಹಾಗೇ ಮುಂದುವರೆಯುತ್ತದೆ. ಹೀಗಿರುವಾಗ ಗ್ರಾಮ ಸರ್ಕಾರದ ಆಡಳಿತವನ್ನು ನಿರ್ವಹಿಸಲು, ಅದರ ಜನರ ಅಗತ್ಯತೆ, ಅವರ ಪರಿಸ್ಥಿತಿ ಮತ್ತು ಮುಂದಿನ ಸವಾಲುಗಳನ್ನು ಬಲ್ಲ ಸದಸ್ಯರೇ ಸೂಕ್ತವಾದವರು ಹೊರತು ತಾಲೂಕು ಮಟ್ಟದ ಅಥವಾ ಇತರ ಯಾವುದೇ ಅಧಿಕಾರಿಗಳಲ್ಲ. ಎನ್ನುವುದನ್ನು ಸರ್ಕಾರ ಗಮನಿಸಬೇಕು.

ಲಾಕ್ ಡೌನ್ ಆರಂಭವಾದಾಗ ಸ್ಥಗಿತಗೊಂಡಿದ್ದ ಅಭಿವೃದ್ಧಿ ಚಟುವಟಿಕೆಗಳು ಈಗಷ್ಟೇ ಗರಿಗೆದರುತ್ತಿದೆ. ಅತಿವೃಷ್ಟಿ – ಅನಾವೃಷ್ಟಿಗೆ ತುತ್ತಾಗಿ ತೀವ್ರ ಬಡತನ ಮತ್ತು ನಿರುದ್ಯೋಗದಿಂದ ಬಳಲುತ್ತಿರುವ ಗ್ರಾಮೀಣರ ಬದುಕಿನ ಆಶಾಕಿರಣವಾಗಿ 'ನರೇಗಾ' ಯೋಜನೆಯು ಕಾರ್ಯಗತಗೊಳ್ಳುತ್ತಿರುವುದಷ್ಟೇ. ಇಂತಹ ಸಮಯದಲ್ಲಿ ಇವುಗಳನ್ನು ನಿರ್ವಹಣೆ ಮತ್ತು ಮೇಲ್ವಿಚಾರಣೆಯೊಂದಿಗೆ ಮುಂದುವರೆಸಿಕೊಂಡು ಹೋಗುತ್ತಿರುವವರು ಈಗಿನ ಪ್ರತಿನಿಧಿಗಳೆ ಎನ್ನುವುದನ್ನು ಮರೆಯಬಾದರು. ಆರ್ಥಿಕ ಪುನಶ್ಚೇತನಗೊಳ್ಳುತ್ತಿರುವ ಸಮಯದಲ್ಲಿ ಸ್ಥಳೀಯ ನಾಯಕತ್ವದ ಅಗತ್ಯತೆ

ಎಂದಿಗಿಂತಲೂ ಹೆಚ್ಚಾಗಿದೆ. **ಈ ಸಂದರ್ಭದಲ್ಲಿ ಅಧಿಕಾರಾವಧಿ ಮುಗಿಯಿತೆನ್ನುವ ಕಾರಣದಿಂದ ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ತೆಗೆದು ಯಾವುದೋ ಅಧಿಕಾರಿಗಳಿಗೆ ನೀಡುವುದು ಗ್ರಾಮೀಣರ ಬದುಕಿನ ಮೇಲೆ ಎಳೆದ ಬರೆಯೆ ಸರಿ.** ಇದರ ಜೊತೆಗೆ ಈ ಎಲ್ಲಾ ಕಾರ್ಯಕ್ರಮಗಳ ಸುಗಮ ಚಾಲನೆಗೆ ಪೂರಕವಾಗಿ ಹಣಕಾಸಿನ ನಿರ್ವಹಣೆ ಮಾಡಲು ಅಧ್ಯಕ್ಷರ ಪಾತ್ರ ಬಹುಮುಖ್ಯ ಎನ್ನುವುದು ಗಮನಿಸಬೇಕಾದ ಪ್ರಮುಖ ಅಂಶ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸಭೆಗಳು ತನ್ನದೇ ಆದ ಮಹತ್ವ ಹೊಂದಿರುವ ಗ್ರಾಮ ಸಭೆಗೆ ಎಲ್ಲಾ ಹಂತದ ಸಮಾನಾಂತರ ಸರ್ಕಾರ – ಅದರ ಅಧಿಕಾರಿಗಳು ಉತ್ತರದಾಯಿಯಾಗಿರಬೇಕು ಎನ್ನುವುದು ಗ್ರಾಮ ಸ್ವರಾಜ್ಯದ ಆಶಯ. ಇದಕ್ಕೆ ಪೂರಕವಾಗಿ ಬಂದ ಪಂಚಾಯತ್ ಮಟ್ಟದ ಕೆ.ಡಿ.ಪಿ. ಸಭೆಯು ಅಷ್ಟೇ ಮಹತ್ವದ್ದಾಗಿದೆ. **ಅಗತ್ಯ ಸಂದರ್ಭಗಳಲ್ಲಿ ಸಂಬಂಧಿತ ಇಲಾಖಾಧಿಕಾರಿಗಳ ಗೈರು ಹಾಜರಿಯಿಂದಲೇ ಇವರೆಡೂ ಸಭೆಗಳು ಹೆಚ್ಚು ಬಾರಿ ವಿಫಲವಾದ ನಿದರ್ಶನಗಳು ಪ್ರತಿ ಪಂಚಾಯತ್‌ನಲ್ಲೂ ಸಿಗುತ್ತದೆ.** ಇದಕ್ಕೆ ಕಾರಣ **ಆಯಾ ಇಲಾಖೆಗಳಲ್ಲಿರುವ ಸಿಬ್ಬಂದಿ/ಅಧಿಕಾರಿಗಳ ಕೊರತೆಯೊಂದಿಗೆ,** ಗ್ರಾಮ ಸಭೆಗಿರುವ ಬದ್ಧತೆಯಲ್ಲಿನ ಕರ್ತವ್ಯ ಲೋಪವೂ ಕಾರಣ ಎನ್ನುವುದರಲ್ಲಿ ಸಂಶಯವಿಲ್ಲ.

ವಿವಿಧ ಇಲಾಖೆಗಳಲ್ಲಿ ಇರುವ ಅಧಿಕಾರಿಗಳಿಗೆ, ಅವರ ಕೆಲಸದ ಜೊತೆಗೆ ಖಾಲಿ ಇರುವ ಹುದ್ದೆಗಳ ಕೆಲಸವನ್ನೂ ಅವರೇ ನಿರ್ವಹಿಸಬೇಕಾದಷ್ಟು ಹೊರೆಯಿದೆ. ಅದರ ಜೊತೆಗೆ ಗ್ರಾಮ ಸರ್ಕಾರದ ಆಡಳಿತದಂತಹ ಮಹತ್ವದ ಜವಾಬ್ದಾರಿಯನ್ನು ನೀಡಿದರೆ, ಎರಡಕ್ಕೂ ನ್ಯಾಯ ಒದಗಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗುತ್ತದೆ. ಅಧಿಕಾರಿಗಳ ಕೊರತೆಯಿಂದ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತ್‌ಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತ್‌ಗಳ ಜವಾಬ್ದಾರಿ ನೋಡಿಕೊಳ್ಳುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ತಮ್ಮ ಕೆಲಸ ಮಾಡಿಸಿಕೊಳ್ಳುವಲ್ಲಿ ಬೇಸತ್ತಿರುವ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲದೇ, ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತ್‌ಗಳ ಆಡಳಿತ ನಡೆಸುವ ತಾಲೂಕು ಮಟ್ಟದ ಅಧಿಕಾರಿಗಳಿಂದ ಕೆಲಸ ಮಾಡಿಸಿಕೊಳ್ಳುವ ಪರಿಪಾಟಲು ಆ ದೇವರಿಗೆ ಪ್ರೀತಿ ಎನ್ನಬೇಕು.

ಆರೋಗ್ಯ ತುರ್ತು ಪರಿಸ್ಥಿತಿ, ನೀರಿನ ಸಮಸ್ಯೆ, ಅರ್ಧಕ್ಕೆ ನಿಂತ ಕಾಮಗಾರಿಗಳು, ನಗರಗಳಿಂದ ಕೆಲಸಗಳಿಲ್ಲದೇ – ಅನಾರೋಗ್ಯದ ಭಯದಿಂದ ಊರಿನತ್ತ ಮುಖ ಮಾಡಿರುವ ಕಾರ್ಮಿಕರು, ನಿರುದ್ಯೋಗ, ಆಹಾರ, ವಸತಿಯ ವ್ಯವಸ್ಥೆಯನ್ನು ಕಲ್ಪಿಸಬೇಕಾದ ತುರ್ತು, ಹಣಕಾಸಿನ ಅಡಚಣೆ ಮುಂತಾದ ಸಮಸ್ಯೆಗಳಿಂದ ನಲುಗುತ್ತಿರುವ ಈ ಸಮಯದಲ್ಲಿ ಸ್ಥಳೀಯ ಆಡಳಿತದ ಪ್ರತಿನಿಧಿಗಳು ತಮ್ಮ ಕ್ಷೇತ್ರಗಳಲ್ಲಿ ನಿತ್ಯ ಸಂಚಾರ, ಜನರೊಂದಿಗೆ ನಿರಂತರ ಸಂಪರ್ಕ, ತುರ್ತು ಸ್ಪಂದನೆಯೊಂದಿಗೆ ಸಾಧ್ಯವಾದಷ್ಟು ಶೀಘ್ರವಾಗಿ ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸುತ್ತಿದ್ದಾರೆ.

ಆಡಳಿತ ಸಮಿತಿಯ ನೇಮಕವು ಪಂಚಾಯತ್ ಮಟ್ಟದಲ್ಲಿ ಪಕ್ಷದ ಪ್ರಾಬಲ್ಯಕ್ಕೆ ಎಡೆ ಮಾಡಿಕೊಡುತ್ತ, ಸ್ಥಳೀಯಾಡಳಿತದಲ್ಲಿ ಪಕ್ಷ ರಾಜಕೀಯವನ್ನು ಮುನ್ನೆಲೆಗೆ ತರುವ ಪ್ರಕ್ರಿಯೆಯಾಗುತ್ತದೆ. ಸೀಮಿತ ಅವಧಿಯಾದರೂ ಅಧಿಕಾರವನ್ನು ಪಡೆಯುವ ಆಸೆಯಿಂದ ಭ್ರಷ್ಟಾಚಾರವೂ ಮುಂಚೂಣಿಗೆ ಬರುವ ಅಪಾಯ ತೀವ್ರವಾಗಿರುತ್ತದೆ. ಹೀಗೆ ರಚನೆಯಾಗುವ ಆಡಳಿತ ಸಮಿತಿಯಿಂದ ಪಂಚಾಯತ್‌ನ ಸಮಗ್ರ ಅಭಿವೃದ್ಧಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರಗಳೆ ಈ ಸಮಿತಿಯ ಸಾಧನೆಯಾಗುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. **ಯಾರಿಗೂ ಉತ್ತರದಾಯಿಗಳಲ್ಲದ ಅಧಿಕಾರಿಗಳು ಹಾಗೂ ಚುನಾಯಿತರಲ್ಲದ ಆಡಳಿತ ಸಮಿತಿಯ ಸದಸ್ಯರಿಂದ ಗ್ರಾಮ ಸರ್ಕಾರದ ಆಡಳಿತ ಹಳ್ಳಹಿಡಿಯುತ್ತದೆಯೇ ಹೊರತು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುವ ಯಾವುದೇ ಭರವಸೆಯನ್ನು ಹೊಂದಲು ಸಾಧ್ಯವಿಲ್ಲ.**

**ಒಂದು ಆಶಾವಾದ:** ಇಂತಹ ಸಮಯದಲ್ಲಿ ಯಾವುದೇ ಕಾರಣಕ್ಕೂ ಆಡಳಿತಾಧಿಕಾರಿ ಅಥವಾ ಆಡಳಿತ ಸಮಿತಿಯನ್ನು ನೇಮಕ ಮಾಡದೇ ಈಗ ಇರುವ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಸ್ಥಳೀಯ ಆಡಳಿತ ಸಮಿತಿಯನ್ನೇ ಮುಂದುವರೆಸುವಂತೆ ವಿವಿಧ ಹಂತದಲ್ಲಿ ಸರ್ಕಾರವನ್ನು ಒತ್ತಾಯಿಸುವ ಕಾರ್ಯ ನಡೆಯುತ್ತಿದೆ. ಗ್ರಾಮ ಪಂಚಾಯತ್ ಪ್ರತಿನಿಧಿಗಳು ಪಂಚಾಯತ್ ನಿರ್ಣಯದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಸ್ಥಳೀಯಾಡಳಿತದ ಕ್ಷೇತ್ರದಿಂದ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯರೂ ಕೂಡ ಇದಕ್ಕೆ ಪೂರಕವಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದಾರೆ. ವಿವಿಧ ಗ್ರಾಮೀಣ ಸಂಘಟನೆಗಳೂ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡುತ್ತಿದ್ದಾರೆ. ಒಟ್ಟಾರೆ ಗ್ರಾಮೀಣ ಭಾರತದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸಮರ್ಪಕವಾದ ನಿರ್ಧಾರ ಕೈಗೊಳ್ಳಬೇಕಾಗಿದೆ.

ಸುರೇಶ್ ಎಸ್.
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು
ದಿನಾಂಕ: 15–05–2020



Mobile No: 9686737747

Email: sureshgouda91@gmail.com